**III ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**

**SC.46/2023**

ದಿಃ 05.06.2026
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw- 17 Pw -15

| | | |
|---|---|---|
| ಹೆಸರು | ಃ | ಲೋಕೇಶ್ |
| ತಂದೆಯ ಹೆಸರು | ಃ | ಶಿವಮಾದೇಗೌಡ |
| ವಯಸ್ಸು | ಃ | 39 ವರ್ಷ |
| ಉದ್ಯೋಗ | ಃ | ಚನ್ನಪಟ್ಟಣ ಪೂರ್ವ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಜೀಪ್ ಚಾಲಕ |
| ವಾಸಸ್ಥಳ | ಃ | ಚಾಲಕ |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1. ದಿಃ 28.10.2022 ರಂದು ಚನ್ನಪಟ್ಟಣದಲ್ಲಿ ಹೊಯ್ಸಳ ಪೋಲೀಸ್ ವಾಹನದಲ್ಲಿ ಚಾಲಕನಾಗಿ ಕಾರ್ಯ ನಿರ್ವಹಿಸುತ್ತಿದ್ದೆ. ನನ್ನ ಜೊತೆ ಸದರಿ ವಾಹನದಲ್ಲಿ ಚಾಸಾ 16 ರವರು ಸಹ ಕಾರ್ಯ ನಿರ್ವಹಿಸುತ್ತಿದ್ದರು. ಮೇಲ್ಕಂಡ ಪೊಲೀಸ್ ವಾಹನ ಚನ್ನಪಟ್ಟಣ ಗ್ರಾಮಾಂತರ ಪ್ರದೇಶದಲ್ಲಿ ಕಾರ್ಯ ನಿರ್ವಹಿಸುತ್ತಿತ್ತು. ದಿಃ 29.10.2022 ರಂದು ಬೆಳಗಿನ ಜಾವ 1.28 ಗಂಟೆಯಲ್ಲಿ ವಾಹನ ಗಸ್ತು ಮಾಡುವಾಗ ಮೈಸೂರಿನ ವಾಸಿ ಕುಮಾರ ಆರಾಧ್ಯ ರವರು 112 ಸಹಾಯ ವಾಣಿಗೆ ಕರೆ ಮಾಡಿ ನುಣ್ಣೂರು ಗ್ರಾಮದಲ್ಲಿ ಶಿವು ಎಂಬುವವರಿಗೆ ಅದೇ ಗ್ರಾಮದ ವಾಸಿಯಾದ ಮೋಗಣ್ಣ ಎಂಬುವವರು ಹೊಡೆದು ಕರೆದುಕೊಂಡು ಹೋಗಿರುವುದಾಗಿ ದೂರನ್ನು ನೀಡಿದರ ಮೇರೆಗೆ

ಸದರಿ ಮಾಹಿತಿಯನ್ನು ಪಡೆದುಕೊಂಡ ನಾವು ನುಣ್ಣೂರು ಗ್ರಾಮಕ್ಕೆ ಬೆಳಗಿನ ಜಾವಾ 2.18 ಗಂಟೆ ಸಮಯಕ್ಕೆ ಶಿವು ಎಂಬುವವರ ಮನೆಯ ಬಳಿ ಹೋಗಿ ಶಿವುರವರ ತಾಯಿ ಗಾಯತ್ರಮ್ಮರವರನ್ನು ವಿಚಾರಣೆ ಮಾಡಿದೆವು. ಗಾಯತ್ರಮ್ಮ ರವರು ಅವರ ಮಗ ಶಿವು ಅಲಿಯಾಸ್ ರೇಣುಕಾರಧ್ಯನಿಗೆ ಎದುರು ಮನೆಯ ವಾಸಿಯಾದ ಮೋಗಣ್ಣ ಅಆತನ ಬಾವ ಮೈದುನ ಉಮೇಶ ಹಾಗೂ ಮತ್ತೊಬ್ಬ ಸ್ನೇಹಿತ ಮೋಟಾರ್ ಸೈಕಲ್ ನಲ್ಲಿ ಕರೆದುಕೊಂಡು ಹೋಗಿರುವುದಾಗಿ ಹೇಳಿದರು. ನಮ್ಮ ವಾಹನವನ್ನು ನೋಡಿ ಅಕ್ಕಪಕ್ಕದ ಮನೆಯವರು ಸಹ ಬಂದು ಮೇಲೆ ಕಾಣಿಸಿದ 03 ಜನರು ಶಿವುವಿನ ಮೇಲೆ ಹಲ್ಲೆ ನಡೆಸಿ ಮೋಟಾರ್ ಸೈಕಲ್ ನಲ್ಲಿ ಆತನನ್ನು ಕರೆದುಕೊಂಡು ಹೋಗಿರುವ ಬಗ್ಗೆ ತಿಳಿಸಿದರು. ನಾವು ಪಕ್ಕದ ಮನೆಯಲ್ಲಿ ಇದ್ದ ಮೋಗಣ್ಣರವರನ್ನು ಕರೆದು ತಿಳುವಳಿಕೆ ನೀಡಿ ಶಿವುರವರನ್ನು ಕೂಡಲೇ ಅವರ ಮನೆಗೆ ಕರೆದುಕೊಂಡು ಬಂದು ಬಿಡುವಂತೆ ತಿಳುವಳಿಕೆ ನೀಡಿದೆವು. ಆ ಸಮಯದಲ್ಲಿ ಮೋಗಣ್ಣ ತನ್ನ ಬಾವ ಮೈದುನನಿಗೆ ಹೇಳಿ ಶಿವು ಅವರನ್ನು ವಾಪಸ್ ಕರೆಸುವುದಾಗಿ ಒಪ್ಪಿಕೊಂಡರು. ನಾವು ಸದರಿ ಮಾಹಿತಿಯನ್ನು ಸಹಾಯವಾಣಿಗೆ ಅಪ್ಲೋಡ್ ಮಾಡಿ ಅಕ್ಕೂರು ಪೊಲೀಸ್ ಠಾಣೆಗೆ ಸಹ ತಿಳಿಸಿದೆವು. ಮರುದಿನ ಶಿವ ಅವರ ಮೃತದೇಹ ಪತ್ತೆ ಆಯಿತು ಎಂದು ನನಗೆ ತಿಳಿದು ಬಂತು. ನಾವು ಸಹಾಯವಾಣಿಗೆ ಮಾಹಿತಿಯನ್ನು ಅಪ್ಲೋಡ್ ಮಾಡಿರುವ ಬಗ್ಗೆ ಕಂಟ್ರೋಲ್ ರೂಂನಲ್ಲಿ ದಾಖಲೆ ಲಭ್ಯವಿರುತ್ತದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸರು

ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತಾರೆ. ನುಣ್ಣೂರು ಗ್ರಾಮದಲ್ಲಿ ನಾವು ವಿಚಾರಾಣೆ ಮಾಡಿದ  ವ್ಯಕ್ತಿಯಾದ ಮೋಗಣ್ಣರವರನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿದಾರರು 1 ನೇ ಆರೋಪಿ ಮೊಗಣ್ಣರವರನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ವಕೀಲರಿಂದ**

2. ಸಹಾಯವಾಣಿಯಿಂದ ನಮಗೆ ಕರೆ ಬಂದಾಗ ನಮ್ಮ ವಾಹನ ಬೆಂಗಳೂರು ಮೈಸೂರು ಎಕ್ಸ್ ಪ್ರೆಸ್ ವೇನ ಮುದಗೆರೆ ಗೇಟ್ ಬಳಿ ಇತ್ತು. ಮುದಗೆರೆ ಗೇಟ್ ನಿಂದ ನುಣ್ಣೂರು ಗ್ರಾಮ ಸುಮಾರು 35 ಕಿಮೀ ದೂರದಲ್ಲಿ ಇರುತ್ತದೆ. ನುಣ್ಣೂರು ಗ್ರಾಮದಲ್ಲಿ ಗಲಾಟೆ ಆಗಿದ್ದು, ಈ ಬಗ್ಗೆ ಅಟೆಂಡ್ ಮಾಡಿ ಎಂದು ಸಹಾಯವಾಣಿಯಿಂದ ಕರೆ ಬಂದಿರುತ್ತದೆ ಎಂದರೆ ಸರಿ. ನುಣ್ಣೂರು ಗ್ರಾಮಕ್ಕೆ ಬಂದು ಶಿವುರವರ ತಾಯಿ ಹಾಗೂ ಅಕ್ಕಪಕ್ಕದ ಮನೆಯವರನ್ನು ವಿಚಾರಿಸಲಾಗಿ ಶಿವುನ ಮೇಲೆ ಮಾರಣಾಂತಿಕ ಹಲ್ಲೆ ಮಾಡಿ ಆತನನ್ನು ಅಪಹರಿಸಲಾಗಿದೆ ಎನ್ನುವ ಬಗ್ಗೆ ನಮಗೆ ತಿಳಿದು ಬಂತು ಎಂದರೆ ಸರಿ. ನಮಗೆ ತಿಳಿದು ಬಂದ ಮಾಹಿತಿಯನ್ನು ನಾವು ಕೂಡಲೇ ಅಕ್ಕೂರು ಪೊಲೀಸ್ ಠಾಣೆಯ ಠಾಣಾಧಿಕಾರಿಯವರಿಗೆ ಮೊಬೈಲ್ ಮೂಲಕ ಬೆಳಗಿನ ಜಾವ 2.30 ಗಂಟೆ ಸುಮಾರಿಗೆ ತಿಳಿಸಿರುತ್ತೇವೆ. ನುಣ್ಣೂರು ಗ್ರಾಮದಲ್ಲಿ ಅಕ್ಕೂರು ಪೋಲೀಸ್ ಠಾಣೆಯ ಅಧಿಕಾರಿಗಳು ಆ ಊರಿಗೆ ಬರುವ ವರೆವಿಗೆ ಕೃತ್ಯ ನಡೆದ ಸ್ಥಳವನ್ನು ಸಂರಕ್ಷಿಸುವ ಪ್ರಯತ್ನ ನಾವು ಮಾಡಿಲ್ಲ. ಘಟನೆಗೆ

ಸಂಬಂಧಿಸಿದಂತೆ ನಾವು ಅಕ್ಕೂರು ಪೋಲೀಸ್ ಠಾಣೆಗೆ ಲಿಖಿತವಾಗಿ ಮಾಹಿತಿ ನೀಡಿಲ್ಲ.

3. ಹೊಯ್ಸಳ ಪೋಲೀಸ್ ವಾಹನಹದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ನಮಗೆ ಬಾಡಿ ಕ್ಯಾಮೆರಾ ನೀಡಿರದ ಕಾರಣ ನಾವು ನುಣ್ಣೂರು ಗ್ರಾಮಕ್ಕೆ ಭೇಟಿ ನೀಡಿ ವಿಚಾರಣೆ ನಡೆಸಿದ ಬಗ್ಗೆ ಕ್ಯಾಮೆರಾ ರೆಕಾರ್ಡಿಂಗ್ ಇರುವುದಿಲ್ಲ. ಪೋಲೀಸ್ ಸಹಾಯವಾಣಿಗೆ ಘಟನೆಯ ಬಗ್ಗೆ ಲಿಖಿತವಾಗಿ ಟ್ಯಾಬ್ ಮೂಲಕ ಮಾಹಿತಿ ಅಪ್ಲೋಡ್ ಮಾಡಲಾಗಿರುತ್ತದೆ. ನುಣ್ಣೂರು ಗ್ರಾಮದಲ್ಲಿ ಶಿವುರವರ ತಾಯಿ ಹಾಗೂ ಅಕ್ಕಪಕ್ಕದವರನ್ನು ನಾವು ವಿಚಾರಣೆ ಮಾಡಿದಾಗ ಶಿವುಗೆ ಈ ಪ್ರಕರಣದ ಆರೋಪಿಗಳು ಹಲ್ಲೆ ನಡೆಸಿ ಅಪಹರಿಸಿರುವ ಬಗ್ಗೆ ಅವರು ಯಾವುದೇ ಮಾಹಿತಿ ನೀಡದೇ ಇದ್ದು ಶಿವುಗೆ ಬೆಂಗಳೂರಿನಿಂದ ಬಂದ 4 – 5 ಅಪರಿಚಿತ ವ್ಯಕ್ತಿಗಳು ಅಪಹರಿಸಿರುವ ಬಗ್ಗೆ ನಮಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ತನಿಖಾಧಿಕಾರಿಯವರು ಆರೋಪಿಗಳ ವಿರುದ್ದ ನನ್ನಿಂದ ಸುಳ್ಳು ಹೇಳಿಕೆಯನ್ನು ಸೃಷ್ಟಿ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಎಸ್.ಎ. ಹಿದಾಯತ್ ಉಲ್ಲಾ ಷರೀಫ್)
III ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.